**(2) ರಾಜಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಅಗ್ರಹಾರ ದಾಸರಹಳ್ಳಿ ಕೆರೆ ಅಂಗಳದಲ್ಲಿ ಅಕ್ರಮ ಕಟ್ಟಡ ನಿರ್ಮಾಣ**

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ರಾಜಾಜಿನಗರ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ ಅಗ್ರಹಾರ ದಾಸರಹಳ್ಳಿ ಕೆರೆ ಅಂಗಳದಲ್ಲಿ ಅಕ್ರಮ ಕಟ್ಟಡ ನಿರ್ಮಾಣ ಕೆಲಸಗಳು ನಡೆಯುತ್ತಿದ್ದು, ದಿನೇ ದಿನೇ ಕೆರೆ ಅಂಗಳ ಸಂಕುಚಿಗೊಳ್ಳುತ್ತಾ ಹೋಗುತ್ತಿದೆ. 1991ರಲ್ಲಿ ಈ ಜಾಗದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣಕ್ಕಾಗಿ ಶಂಕುಸ್ಥಾಪನೆಯನ್ನು ಸಹ ಮಾಡಲಾಯಿತು. ಕೆರೆ ಅಂಗಳವನ್ನು ಸರ್ವೆ ಮಾಡಿ, ಅಂಗಳದ ಸರಹದ್ದನ್ನು ಗುರುತಿಸಿ, ಭೂಮಿ ಕಬಳಿಸುವವದರಿಂದ ದಾಸರಹಳ್ಳಿ ಕೆರೆ ಅಂಗಳವನ್ನು ಉಳಿಸಬೇಕೆಂದು ಈ ಹಿಂದೆ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದೆ. ಆದರೆ, ಇಲ್ಲಿಯವರೆಗೆ ಯಾವುದೇ ಕ್ರಮ ಜರುಗಿಲ್ಲ, ಅತಿಕ್ರಮ ನಿರ್ಮಾಣ ಅವ್ಯಾಹತವಾಗಿ ಮುಂದುವರಿದಿದೆ. ಕೂಡಲೇ ಕೆರೆ ಅಂಗಳವನ್ನು ಸರ್ವೆ ಮಾಡಿ, ಸಾರ್ವಜನಿಕರಿಗೆ ಸೇರಿದ ಜಾಗದ ಕಬಳಿಕೆ ಆಗುವುದನ್ನು ನಿಲ್ಲಿಸಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) : (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರ ಪರವಾಗಿ)

ಬೆಂಗಳೂರಿನ ಅಗ್ರಹಾರ ದಾಸರಹಳ್ಳಿಯಲ್ಲಿರುವ ಕೆರೆಯ ಅಂಗಳದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣವನ್ನು ಕಟ್ಟಲು ಉದ್ದೇಶಿಸಿ, ಕೆರೆಯನ್ನು ಈಗಾಗಲೇ ಮಣ್ಣಿನಿಂದ ತುಂಬಿ ಸಮಮಟ್ಟಗೊಳಿಸಲಾಗಿದೆ. ಉಳಿಕೆ ಕಾಮಗಾರಿ ಕೆಲಸವನ್ನು ಮಾಡಲು ಕೆರೆಗೆ ಹರಿದುಬರುತ್ತಿದ್ದ ಕೊಚ್ಚೆ ನೀರಿನಿಂದ ಹಾಗೂ ಮಳೆ ನೀರಿನಿಂದ ಕಾಮಗಾರಿ ಕೆಲಸ ಕಾರ್ಯಗಳಿಗೆ ಅನಾನುಕೂಲವಾಗುತ್ತಿದ್ದುದರಿಂದ ಈ ನೀರನ್ನು ಸರಾಗವಾಗಿ ಹರಿಯುವಂತೆ ಮಾಡಲು ಅಂಗಳದ ಪಕ್ಕದಲ್ಲಿ ಶಾಶ್ವತವಾಗಿ ಮಳೆ ನೀರಿನ ಚರಂಡಿಯನ್ನು ಮಾಡಲಾಗುತ್ತಿದ್ದು, ಕೆಲಸವು ಪ್ರಗತಿಯಲ್ಲಿರುತ್ತದೆ. ಮತ್ತು ಕ್ರೀಡಾಂಗಣದ ಉಳಿಕೆ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಅಂದಾಜು ಪಟ್ಟಿಯನ್ನು ಹಾಗೂ ವಿನ್ಯಾಸವನ್ನು ತಯಾರಿಸಲಾಗುತ್ತಿದೆ. ಈ ಕೆರೆಯ ಅಂಗಳಕ್ಕೆ ಹೊಂದಿಕೊಂಡಂತೆ ಒಂದು ಅನಧಿಕೃತ ಶೆಡ್ ಇದ್ದು, ಈ ಶೆಡ್ಡನ್ನು ಹೊಡೆದುಹಾಕಲು ಹೋದಾಗ, ಇದನ್ನು ಕೆಡವದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುವುದು. ಇದರ ಪ್ರತಿಯನ್ನು ಸಂಬಂಧಪಟ್ಟವರಿಂದ ಪಡೆದು ತಡೆಯಾಜ್ಞೆಯನ್ನು ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ತಡೆಯಾಜ್ಞೆಯು ತೆರವಾದ ಕೂಡಲೇ ಹೊಡೆದು ಹಾಕಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಈ ಕೆರೆಯನ್ನು ಕಬಳಿಕೆ ಆಗದಂತೆ ಎಲ್ಲಾ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**(3) ಕಾಪು ವಿಧಾನಸಭಾ ಕ್ಷೇತ್ರದಲ್ಲಿ, ಹಲವಾರು ಕಡೆಗಳಲ್ಲಿ ಮನೆಗಳಿಗೆ ನುಗ್ಗಿ, ಕಳವು, ಅಂಗಡಿ, ವಾಣಿಜ್ಯ ಕೇಂದ್ರಗಳ ಬೀಗ ಮುರಿದು ದರೋಡೆ**

ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಅಧ್ಯಕ್ಷರೇ, ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಕೆಲವು ಸಮಯಗಳಿಂದ ಹಲವಾರು ಕಡೆಗಳಲ್ಲಿ, ಮನೆಗಳಿಗೆ ನುಗ್ಗಿ ಕಳವು, ಅಂಗಡಿ ವಾಣಿಜ್ಯ ಕೇಂದ್ರಗಳ ಬೀಗ ಮುರಿದು ಕಳವು, ಮನೆ ದರೋಡೆ ಇತ್ಯಾದಿ ನಡೆಯುತ್ತಿದೆ. ಪೋಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿದ್ದರೂ ಕಳ್ಳರ ಪತ್ತೆಗೆ, ಕ್ರಮವನ್ನು ತೆಗೆದುಕೊಳ್ಳುವಲ್ಲಿ ಸರ್ಕಾರ ಆಸಕ್ತಿ ವಹಿಸಿಲ್ಲ, ಹೆದ್ದಾರಿ ಗಸ್ತುಪಡೆ, ಪೋಲೀಸ್ ಇಲಾಖೆಯು ಜಾಗೃತಗೊಂಡು, ಕಳವು, ದರೋಡೆಯಾಗದಂತೆ ಸರ್ಕಾರವು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.